ದಿನಾಂಕ 20.12.2025 ರಂದು ದಿನಾಂಕ 10.11.2025 ರ ಆದೇಶದ ಅನ್ವಯ ಸಾಕ್ಷಿಯನ್ನು ಪುನಃ ಕರೆಯಿಸಿ ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

<u>**ಮುಂದುವರಿದ ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರವರಿಂದಃ**</u>

27. ಚಾಸಾ 35 ನಂದೀಶ್ ಹೆಚ್.ಎಲ್. ನನಗೆ ಗೊತ್ತು. ನಾನು ತಾವರೆಕೆರೆ ಠಾಣೆಯ ಸಬ್ ಇನ್‌ಸ್ ಪೆಕ್ಟರ್ ಆಗಿದ್ದಾಗ ಚಾಸಾ 35 ನಂದೀಶ್ ರವರು ನಮ್ಮ ಮಾಗಡಿ ವೃತ್ತದ ವೃತ್ತ ನಿರೀಕ್ಷಕರಾಗಿದ್ದರು. ಚಾಸಾ 35 ರವರು ಈಗ ಸುಮಾರ 3 ವರ್ಷಗಳ ಹಿಂದೆ ಮರಣ ಹೊಂದಿರುತ್ತಾರೆ. ಅವರ ಕರ್ತವ್ಯದ ವೇಳೆಯಲ್ಲಿ ಅವರು ಮಾಡಿರುವ ಸಹಿಯನ್ನು ನೋಡಿ ನನಗೆ ಗೊತ್ತಿದೆ. ನಿಶಾನೆ ಪಿ 2 ನ್ನು ನಾನು ಈಗ ನೋಡುತ್ತಿದ್ದು ಸದರಿ ದಾಖಲಾತಿಯಲ್ಲಿ ವೃತ್ತ ನಿರೀಕ್ಷಕರಾಗಿದ್ದಂತಹ ನಂದೀಶ್ ಹೆಚ್.ಎಲ್. ರವರ ಸಹಿ ಇದೆ. ಸಾಕ್ಷಿ ಗುರುತಿಸಿರುವಂತಹ ಸದರಿ ಸಹಿಯನ್ನು ನಿಶಾನೆ ಪಿ 2(ಸಿ) ಎಂದು ಗುರುತಿಸಲಾಯಿತು. ನಿಶಾನೆ ಪಿ 3 ಮತ್ತು 4 ರಲ್ಲಿಯು ಸಹ ಅವರ ಸಹಿ ಇದೆ. ಸಾಕ್ಷಿ ಗುರುತಿಸಿರುವಂತಹ ಸದರಿ ಸಹಿಯನ್ನು ನಿಶಾನೆ ಪಿ 3(ಎ) ಮತ್ತು 4(ಎ) ಎಂದು ಗುರುತಿಸಲಾಯಿತು.

28. ನಿಶಾನೆ ಪಿ 5 ಮತ್ತು 6 ರಲ್ಲಿಯೂ ಸಹ ಸಾಕ್ಷಿ ಚಾಸಾ 35 ರವರ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಸಹಿಯನ್ನು ನಿಶಾನೆ ಪಿ 5(ಡಿ) ಮತ್ತು 6(ಡಿ) ಎಂದು ಗುರುತಿಸಲಾಯಿತು. ನಿಶಾನೆ ಪಿ 7 ರಿಂದ 11 ರಲ್ಲಿಯೂ ಸಹ ಸಾಕ್ಷಿ ಚಾಸಾ 35 ರವರ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಸಹಿಯನ್ನು ನಿಶಾನೆ ಪಿ 7(ಎ) ರಿಂದ 11(ಎ) ಎಂದು ಗುರುತಿಸಲಾಯಿತು. ಶವ ತನಿಖಾ ವರದಿಯಾದ ನಿಶಾನೆ ಪಿ 12 ರಲ್ಲಿಯೂ ಸಾಕ್ಷಿ ಚಾಸಾ 35 ರವರ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಸಹಿಯನ್ನು ನಿಶಾನೆ ಪಿ 12(ಡಿ) ಎಂದು ಗುರುತಿಸಲಾಯಿತು.

29. ನಿಶಾನೆ ಪಿ 13 ರಿಂದ 15 ರಲ್ಲಿಯೂ ಸಹ ಸಾಕ್ಷಿ ಚಾಸಾ 35 ರವರ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಸಹಿಯನ್ನು ನಿಶಾನೆ ಪಿ 13(ಎ) ರಿಂದ 15(ಎ) ಎಂದು ಗುರುತಿಸಲಾಯಿತು. ನಿಶಾನೆ ಪಿ 16 ರಲ್ಲಿಯೂ ಸಹ ಸಾಕ್ಷಿ ಚಾಸಾ 35 ರವರ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಸಹಿಯನ್ನು ನಿಶಾನೆ ಪಿ 16(ಡಿ) ಎಂದು ಗುರುತಿಸಲಾಯಿತು. ಅಮಾನತು ಪಂಚನಾಮೆ ನಿಶಾನೆ ಪಿ 17 ರಲ್ಲಿಯೂ ಸಹ ಸಾಕ್ಷಿ ಚಾಸಾ 35 ರವರ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಸಹಿಯನ್ನು ನಿಶಾನೆ ಪಿ 17(ಎ) ಎಂದು ಗುರುತಿಸಲಾಯಿತು. ನಿಶಾನೆ ಪಿ 25 ಮತ್ತು 26 ರಲ್ಲಿಯೂ ಸಹ ಸಾಕ್ಷಿ ಚಾಸಾ 35 ರವರ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಸಹಿಯನ್ನು ನಿಶಾನೆ ಪಿ 25(ಬಿ) ಮತ್ತು 26(ಬಿ) ಎಂದು ಗುರುತಿಸಲಾಯಿತು. ನಿಶಾನೆ ಪಿ 28 ರಲ್ಲಿಯೂ ಸಹ ಸಾಕ್ಷಿ ಚಾಸಾ 35 ರವರ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಸಹಿಯನ್ನು ನಿಶಾನೆ ಪಿ 28(ಬಿ) ಎಂದು ಗುರುತಿಸಲಾಯಿತು.

30. ಮಾಲು ಪಟ್ಟಿ ಸಂಖ್ಯೆ 128/2016 ರಲ್ಲಿ ಅಮಾನತು ಪಡಿಸಿಕೊಳ್ಳಲಾಗಿದೆ ಎಂದು ಹೇಳುವಂತಹ ವಸ್ತುಗಳ ಮೇಲೆ ಲಗತ್ತಿಸಿರುವಂತಹ ಚೀಟಿಯಲ್ಲಿರುವ ಚಾಸಾ 35 ರವರ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಈ ಪ್ರಕರಣದ ದೋಷಾರೋಪಣಾ ಪಟ್ಟಿಯನ್ನು ಚಾಸಾ 35 ರವರು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ.

**ಮುಂದುವರಿದ ಪಾಟೀ ಸವಾಲುಃ ಆರೋಪಿಗಳ ಪರವಾಗಿ ಶ್ರೀ.ಆರ್.ಕೆ.ಎಸ್., ವಕೀಲರಿಂದಃ**

31. ವೃತ್ತ ನಿರೀಕ್ಷಕರ ಕಛೇರಿ ಮಾಗಡಿಯಲ್ಲಿದೆ ಎಂದರೆ ಸರಿ. ತಾವರೆಕೆರೆ ಠಾಣೆಯಿಂದ ಸದರಿ ಕಛೇರಿ 15-18 ಕಿ.ಮೀ. ಅಂತರದಲ್ಲಿದೆ. ನಾನು ನನ್ನ ಮುಂದುವರಿದ ಮುಖ್ಯವಿಚಾರಣೆಯಲ್ಲಿ ಗುರುತಿಸಿರುವಂತಹ ಚಾಸಾ 35 ರವರ ಸಹಿ ಇರುವಂತಹ ದಾಖಲಾತಿಗಳ ಬಗ್ಗೆ ನನಗೆ ಖುದ್ದಾಗಿ ಮಾಹಿತಿ ಇಲ್ಲ. ಈ ಪ್ರಕರಣದಲ್ಲಿ ನಾನು ಚಾಸಾ 35 ರವರಿಗೆ ತನಿಖೆಗೆ ಸಹಕರಿಸಿರುವುದಿಲ್ಲ. ನಾನು ನನ್ನ ಮುಂದುವರಿದ ಮುಖ್ಯವಿಚಾರಣೆಯಲ್ಲಿ

ಗುರುತಿಸಿರುವಂತಹ ಸಹಿಗಳನ್ನು ಚಾಸಾ 35 ರವರ ಸಹಿಗಳು ಅಲ್ಲದೇ ಇದ್ದರೂ ಸಹ ಅವರು ನನ್ನ ಮೇಲಾಧಿಕಾರಿಯಾಗಿರುವ ಕಾರಣ ಪ್ರಕರಣಕ್ಕೆ ಪೂರಕವಾಗಲಿ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ**

**(ಪಂಚಾಕ್ಷರಿ.ಎಂ)**
**1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/**
**ವಿಶೇಷ ನ್ಯಾಯಾಧೀಶರು,**
**ರಾಮನಗರ.**